

ಚಿತ್ರ: ವಿಜಯಕುಮಾರಿ ಆರ್

ವಿಚಾರವಾದ, ಪ್ರಗತಿಪರತೆ ಎಲ್ಲವನ್ನೂ ಮಾತುಗಳಲ್ಲಿ ಬಿಂಬಿಸುವ ನಗರವಾಸಿಗಳು ಮೂಢನಂಬಿಕೆಗಳನ್ನು ಸುಪ್ತವಾಗಿಯೇ ಆರಾಧಿಸುತ್ತಿದ್ದಾರೆ. ಆಧುನೀಕರಣದ ಸಂಕೇತವೆಂಬಂತೆ ಕಾಣಿಸುವ ಟಿ.ವಿ.ಗಳೂ ವಾಸ್ತುಶಾಸ್ತ್ರದ ಹೆಸರಿನಲ್ಲಿ ಹಿಂದಕ್ಕೆ ಹೆಜ್ಜೆ ಹಾಕುತ್ತಿವೆ.

■ ಎಚ್.ಕೆ.ಶರತ್

ಇಲ್ಲದಿರುವುದೇ ಕಾರಣವಂತೆ. ಹಾಗಾಗಿ ಬೇರೆ ಮನೆಗೆ ಹೋಗುವ ನಿರ್ಧಾರ ಕೈಗೊಂಡಿರುವುದಾಗಿ ಯಾವುದೇ ಮುಲಾಜಿಗೂ ಅಂಜದೆ ಹೇಳುತ್ತಿದ್ದಾರೆ. ಅಂದ ಹಾಗೆ ನಮ್ಮ ಮನೆ ಇರುವುದು ಸಿಟಿಯಲ್ಲೇ. ವಾಸ್ತುದೋಷದ ನೆಪವೊಡ್ಡಿ ಮನೆ ಖಾಲಿ ಮಾಡುತ್ತಿರುವವರು ಕೂಡ ನಗರವಾಸಿಗಳೇ.

ಮನೆ ನಿರ್ಮಿಸಲು ಪ್ಲ್ಯಾನ್ ಸಿದ್ಧಪಡಿಸುವ ಸಿವಿಲ್ ಎಂಜಿನಿಯರ್ ಆಗಿರುವ ಮತ್ತೊಬ್ಬ ಸ್ನೇಹಿತ ಟಿವಿ ವಾಸ್ತುಶಾಸ್ತ್ರಜ್ಞರ ಕಾಟದ ಬಗ್ಗೆ ಗಮನ ಸೆಳೆದ. 'ಟಿವಿಗಳಲ್ಲಿ ಕಾಣಿಸಿಕೊಳ್ಳುವ ಸ್ವಯಂಘೋಷಿತ ವಾಸ್ತು ತಜ್ಞರ ದೆಸೆಯಿಂದಾಗಿ ವಾಸ್ತುವಿಗಿರುವ ಬೆಲೆ ಹೋಗುತ್ತಿದೆ. ನಮ್ಮ ಪ್ರಕಾರ ಗಾಳಿ ಬೆಳಕು ಹೆಚ್ಚು ಲಭ್ಯವಾಗುವಂತೆ ಮನೆ ವಿನ್ಯಾಸ ಮಾಡುವುದು ವಾಸ್ತು. ಆದ್ರೆ ಇವ್ರು ಜನರ ತಲೆಗೆ ಏನೇನೊ ತುಂಬಿ, ಅವರು ಸಿವಿಲ್ ಎಂಜಿನಿಯರ್‌ಗಳ ಮಾತು ಕೇಳದ ಹಾಗೆ ಮಾಡಿಬಿಟ್ಟಿದ್ದಾರೆ' ಎನ್ನುವುದು ಅವನ ಅಸಮಾಧಾನ. ತನ್ನ ಗ್ರಾಹಕರನ್ನು ಉಳಿಸಿಕೊಳ್ಳುವ ಅಥವಾ ಆಕರ್ಷಿಸುವ ಸಲುವಾಗಿ ಈತನೂ ಈಗ ವಾಸ್ತು ಪ್ರಕಾರ ಮನೆ ವಿನ್ಯಾಸ ಮಾಡಿಕೊಡುವ ಆಶ್ವಾಸನೆ ನೀಡುತ್ತಿದ್ದಾನೆ. ಅಲ್ಲದೆ, ಗಾಳಿ ಬೆಳಕಿನ ಆಚೆಗೂ ವಿಸ್ತರಿಸಿಕೊಂಡಿರುವ ವಾಸ್ತು 'ಜ್ಞಾನ'ವನ್ನು ಅರಿಯತೊಡಗಿದ್ದಾನೆ.

ಮೊದಲೆಲ್ಲ ಸೀಮಿತ ಪರಿಧಿಯಲ್ಲಿ ಕೆಲವೇ ಕೆಲವು ಉಳ್ಳವರನ್ನಷ್ಟೆ ಬಾಧಿಸುತ್ತಿದ್ದ ವಾಸ್ತು, ಸರಳವಾಗಿ ಟಿ.ವಿ. ವಾಹಿನಿಗಳ ಮೂಲಕ ವೇಗವಾಗಿ ಎಲ್ಲರನ್ನೂ ತಲುಪಲಾರಂಭಿಸಿದೆ. ಈಗ ಇವು ಮನೆ– ಮನಸ್ಸುಗಳ ಮೇಲೆ ಬೀರಲಾರಂಭಿಸಿರುವ ತೀವ್ರ ಅಡ್ಡಪರಿಣಾಮ ನಾವು ನಿರ್ಲಕ್ಷ್ಯಿಸುವ ಮಟ್ಟದಲ್ಲಿದೆಯೇ? ಎಲ್ಲ ಸಮಸ್ಯೆಗಳಿಗೂ ವಾಸ್ತು ಮೂಲಕ ಪರಿಹಾರ ಹುಡುಕುವ ಮತ್ತು ಹಾಗೆ ಹುಡುಕುವವರ ಅಗತ್ಯವನ್ನೇ ಬಂಡವಾಳ ಮಾಡಿಕೊಂಡು ಬಲಿಯುವ ವಾಸ್ತು ಶಾಸ್ತ್ರಜ್ಞರನ್ನು 'ಆಧುನಿಕ ಮೌಢ್ಯದ ರಾಯಭಾರಿ'ಗಳೆಂದು ಕರೆಯಬಾರದೆ? ಹಾಗೆ ಕರೆಯುವುದು ಕೂಡ ಮತ್ತೊಬ್ಬರ ನಂಬಿಕೆಯನ್ನು ಗೇಲಿ ಮಾಡುವುದೇ?

ವಾಸ್ತು ಹೆಸರಿನ ನಂಬಿಕೆಗೆ ಸಂಬಂಧಿಸಿದ ಮತ್ತೊಂದು ಹಿಮ್ಮುಖ ಚಲನೆ, ಮಹಾನಗರಗಳಲ್ಲೇ ಆರಂಭಿಕ ಹೆಜ್ಜೆಗಳನ್ನಿರಿಸಿ, ಇದೀಗ ಹಳ್ಳಿಗಳಲ್ಲಿ ಮೇಲೇರುತ್ತಿರುವ ಹೊಸ ಮನೆಗಳ ತಳಪಾಯದವರೆಗೂ ಚಾಚಿಕೊಂಡಿರುವುದು ಏನನ್ನು ಸೂಚಿಸುತ್ತದೆ? ಸ್ನೇಹಿತ ನನ್ನೆದುರು ಮಂಡಿಸಲು ಮುಂದಾದ ಹಳ್ಳಿಗಳಷ್ಟೇ ಮೌಢ್ಯದ ಕೂಪಗಳೆಂಬ ವಾದವನ್ನು ವಾಸ್ತು ದಕ್ಕಿಸಿಕೊಂಡ ಹಿಮ್ಮುಖ ಚಲನೆ ಅಲ್ಲಗಳೆಯುವುದಿಲ್ಲವೇ?

ವೃತ್ತಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಬೆಂಗಳೂರಿನಲ್ಲಿ ನೆಲೆ ನಿಂತಿರುವ ಸ್ನೇಹಿತನೊಬ್ಬ ಇತ್ತೀಚೆಗೆ ಅನ್ಯಜಾತಿಯ ಹುಡುಗಿಯನ್ನು ಪ್ರೀತಿಸುತ್ತಿದ್ದ ವಿಚಾರವನ್ನು ತನ್ನ ಮನೆಯವರಿಗೆ ತಿಳಿಸಿದ ಸಂದರ್ಭದಲ್ಲಿ ಅವನ ಪೋಷಕರು ಕೂಡಾ ಮತ್ತೆ ಹಳ್ಳಿಯತ್ತಲೇ ಬೊಟ್ಟು ಮಾಡಿದ್ದರು. 'ಸಿಟಿಯಲ್ಲಿ ಬದುಕುತ್ತಿರುವ ನಿಂಗೆ ಜಾತಿ ಅನ್ನೋದು ಈಗೆಲ್ಲಿದೆ ಅನ್ನಿಸಬಹುದು. ಆದ್ರೆ ಹಳ್ಳಿಯಲ್ಲಿರುವ ನಮ್ಮ ಸಂಬಂಧಿಕರೆಲ್ಲ ಜಾತಿಗೆ ಎಷ್ಟು ಬೆಲೆ ಕೊಡ್ತಾರೆ ಅನ್ನೋದು ನಿಂಗೆ ಗೊತ್ತಿಲ್ಲ. ಹಾಗೇನಾದ್ರೂ ನೀನು ಬೇರೆ ಜಾತಿ ಹುಡ್ಗಿ ಮದ್ವೆ ಆದ್ರೆ ಊರ್ ಕಡೆ ಮುಖ ಎತ್ತಿಕೊಂಡು ತಿರುಗೋಕಾಗುತ್ತಾ? ನೀನೂ ಮುಂದೆ ಸಾಕಷ್ಟು ಸಮಸ್ಯೆ ಅನುಭವಿಸಬೇಕಾಗುತ್ತೆ. ಸುಮ್ನೆ ನಾವು ತೋರಿಸೋ ಹುಡ್ಗಿಯನ್ನು ಮದ್ವೆ ಮಾಡ್ಕೊ, ಇಲ್ಲಾಂದ್ರೆ ನಮ್ ಜಾತಿ ಹುಡ್ಗಿನೇ ಪ್ರೀತ್ಸಿ ಮದ್ವೆಯಾಗೋದಾದ್ರೂ ನಮ್ಮದೇನು ಅಭ್ಯಂತರವಿಲ್ಲ' ಎಂದು ಬುದ್ಧಿ ಮಾತು ಹೇಳಿದ್ದರು.

ಅದುವರೆಗೂ ಮದುವೆ ವಿಚಾರ ತನಗೆ ಮತ್ತು ಮನೆಯವರಿಗೆ ಮಾತ್ರ ಸಂಬಂಧಿಸಿದ್ದೆಂದು ಭಾವಿಸಿದ್ದ ಈ ಸ್ನೇಹಿತನಿಗೆ, ಅಪರೂಪಕ್ಕೊಮ್ಮೆ ಒಡನಾಡುವ ಹಳ್ಳಿ ಮತ್ತದರ ಜನರೂ ತನ್ನ ಮದುವೆ ಕುರಿತು ಇಷ್ಟೆಲ್ಲ ತಲೆ ಕೆಡಿಸಿಕೊಳ್ಳುತ್ತಿದ್ದಾರೆಯೆ.. ಎಂದು ಹುಬ್ಬೇರಿಸುವಂತಾಗಿದೆ. ತನ್ನ ತಂದೆ –ತಾಯಿ ತಮ್ಮೊಳಗೂ ಸುಪ್ತವಾಗಿರುವ ಜಾತಿಪ್ರಜ್ಞೆಯನ್ನು ಮುನ್ನೆಲೆಗೆ ತಂದು ವಾದಿಸುವ ಬದಲಿಗೆ, ಹಳ್ಳಿಯನ್ನು ಊರುಗೋಲಾಗಿ ಎಳೆದು ತಂದಿರುವುದು ಅವನಿಗೂ ತಿಳಿಯದ ವಿಚಾರವೇನಲ್ಲ.

ಪ್ರಗತಿಪಥದತ್ತ ದಾಪುಗಾಲಿಡುತ್ತಿರುವ ನಗರ ಮತ್ತದರ ರಾಯಭಾರಿಗಳಾದ ನಗರವಾಸಿಗಳು ಸ್ವತಃ ತಾವೇ ಕೊಟ್ಟುಕೊಳ್ಳುತ್ತಿರುವ 'ವಿಚಾರವಂತರು', 'ಜಾತಿ ಧರ್ಮಗಳ ಕಟ್ಟುಪಾಡುಗಳನ್ನು ತೊರೆದವರು' ಎಂಬ ಬಿರುದು ನಂಬಲರ್ಹವೇ? ಹಳ್ಳಿಗಳು ಮಾತ್ರ ಚಲನೆ ದಕ್ಕಿಸಿಕೊಳ್ಳಲು ಸೋತು ಇನ್ನೂ ಮೌಢ್ಯದ ಕೂಪಗಳಾಗಿವೆ ಎಂದು ನಾವು ವಾದಿಸಲು ಹೊರಡುವುದು ಎಷ್ಟು ಸರಿ?

ಹಳ್ಳಿ ಇರಲಿ, ದಿಲ್ಲಿಯೇ ಆಗಿರಲಿ; ಅಕ್ಷರ ಬಲ್ಲವನಾಗಿರಲಿ, ಅನಕ್ಷರಸ್ಥನೇ ಇರಲಿ– ಎಲ್ಲರೊಳಗೂ ಅರಿವಿನ ಹೊಸ ನೆಲೆಗಳು ರೂಪುಗೊಂಡಂತೆ, ಮೌಢ್ಯದ ಕೂಪಗಳೂ ವಿಸ್ತಾರಗೊಳ್ಳುತ್ತಿರುವುದನ್ನು ಅಲ್ಲಗಳೆಯಲಾದೀತೆ? ಹೊರ ಮೈಗೆ ಬಹುಬೇಗ ನವನವೀನ ರಂಗು ಬಳಿದುಕೊಳ್ಳುವ ನಗರ ಮತ್ತದರ ವಾಸಿಗಳು, ಅದೇ ವೇಗದಲ್ಲಿ ತಮ್ಮ ಸುಪ್ತಪ್ರಜ್ಞೆಯೊಳಗೆ ಬೇರೂರಿರುವ ಸಂಪ್ರದಾಯದ 'ಟ್ಯಾಗ್' ತೂಗು ಹಾಕಿಕೊಂಡಿರುವ, ಮನುಷ್ಯ ಘನತೆಗೆ ಕುಂದು ತರುವ ಆಚಾರ ನಿಲುವುಗಳಿಗೆ ಕಸದ ಬುಟ್ಟಿಯಲ್ಲಿ ಜಾಗ ಕಲ್ಪಿಸಲು ಆರಂಭಿಸಿದ್ದಾರೆಯೆ? 'ಹಳ್ಳಿಗಳಷ್ಟೇ ಇನ್ನೂ ತಿಪ್ಪೆಗುಂಡಿಗಳಾಗಿವೆ' ಎಂದು ಬೊಟ್ಟು ಮಾಡುವವರ ಮನಸ್ಸು ಸ್ವಚ್ಛವಾಗಿದೆಯೇ?

ಹೊಸ ದಿರಿಸು ತೊಟ್ಟು ಬದಲಾದ ರೂಪದಲ್ಲಿ ದರುಶನ ಕರುಣಿಸುವ ನಂಬಿಕೆಗೆ ಸಂಬಂಧಿಸಿದ ವಿಚಾರಗಳೆಲ್ಲವೂ ಇನ್ನುಳಿದವರ ಬದುಕಿನ ಘನತೆಗೆ ಯಾವುದೇ ಚ್ಯುತಿ ಬಾರದಂತೆ ಸುಮ್ಮನಿದ್ದು ಬಿಡುವ ವ್ಯವಧಾನ ದಕ್ಕಿಸಿಕೊಂಡಿವೆಯೇ? ಮುಂದಾದರೂ ದಕ್ಕಿಸಿಕೊಳ್ಳಲು ಸಾಧ್ಯವೇ? ಯಾರನ್ನೂ ಶೋಷಿಸದೆ, ಯಾರನ್ನೂ ಮೇಲಕ್ಕೇರಿಸದೆ ಎಲ್ಲರನ್ನೂ ಸಮಾನರಾಗಿ ಕಾಣುವ, ಆರ್ಥಿಕವಾಗಿ ಮತ್ತು ನೈತಿಕವಾಗಿ ಯಾರಿಗೂ ವಂಚಿಸದ ನಂಬಿಕೆಗಳೇನಾದರೂ ಸಂಪ್ರದಾಯದ ಮಗ್ಗುಲಲ್ಲೇ ಇದ್ದರೆ ಅವು ಹಾಗೆಯೇ ಇದ್ದು–ಬಿಡಲಿ. ಉಳಿದವಕ್ಕಾದರೂ ಮೂಢನಂಬಿಕೆಯ ಪಟ್ಟ ದಯಪಾಲಿಸಬಾರದೆ? ಹಾಗೆ ಮಾಡುವುದೂ ಅಪರಾಧವೇ? ●